ಶ್ರೀ ವಿ. ಎಲ್. ಶಿವಪ್ಪ.—ಈ ಮೊದಲು ಕೆಲಸ ಮಾಡಿದವರಿಗೆ ಇನ್ನೂ ಕಾಳನ್ನಾಗಲೀ ಕೂಲಿ ಯನ್ನಾಗಲೀ ಕೊಟ್ಟಿಲ್ಲ. ಈ ಬಗ್ಗೆ ಅಂಕಿಅಂಶಗಳನ್ನು ತರಿಸುತ್ತೇವೆಂದು ಹೇಳುತ್ತಾರೆ. ಕೆಲಸ ಮಾಡಿ ಒಂದೂಮುಕ್ಕಾಲು ವರ್ಷವಾದ ಮೇಲೂ ಸಹ ಕೊಟ್ಟಿಲ್ಲ. ವಿವರಗಳು ಬಂದಮೇಲೆ ತಾವು ಯಾವ ಲೆಕ್ಕದಲ್ಲಿ ಬಾಕಿಯನ್ನು ಕೊಡುತ್ತೀರಿ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಬೇಕೆಂದರೆ, ಇದು ನಿಧಾನ ವಾಗಲು ಕಾರಣವಿಷ್ಟೆ. ಈ ಕೆಲಸದ ವಿಚಾರದಲ್ಲಿ ಈ ಸದನದಲ್ಲಿ ಹಾಗೂ ಹೊರಗಡೆಯಿಂದ ಅನೇಕ ತರಹದ ದೂರುಗಳು ಸರ್ಕಾರಕ್ಕೆ ಬಂದವು. ಕೆಲವು ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳು ಕೈಕೊಂಡ ಕೆಲಸಗಳ ಬಗ್ಗೆ ದೂರುಗಳು ಬಂದ ಕಾರಣದಿಂದ ನಾವು ನಮ್ಮ ಇಲಾಖೆ ಮೂಲಕ ಮತ್ತು ಬೇರೆ ಇಲಾಖೆಗಳ ಮೂಲಕ ತನಿಖೆ ಮಾಡಿಸಬೇಕಾಗಿ ಬಂತು. ಈ ತನಿಖೆಯ ವರದಿ ಬರುವವರೆಗೆ ತಾತ್ಕಾಲಿಕವಾಗಿ ಕೂಲಿ ಕೊಡಬೇಡಿ ಎಂದು ಹೇಳಿದ್ದರಿಂದ ಅದು ಬಾಕಿ ನಿಂತಿದೆ. ಈಗ ವರದಿಗಳು ಬಂದಿರುವ ಕಡೆಗಳಲ್ಲಿ ಕೊಡುತ್ತಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—೧೯೬೦-೬೧ ರಲ್ಲಿ ಕಡಿಮೆ ಅಕ್ಕಿಯನ್ನು ಕೊಟ್ಟಿರುವುದಕ್ಕೆ ಕಾರಣ ವೇನು ? ಜನತಾ ಸರ್ಕಾರ ಕೇಂದ್ರದಲ್ಲಿದ್ದಾಗ ಈ ಯೋಜನೆಗೆ ಅದು ವಿಶೇಷ ಪ್ರಾಧಾನ್ಯತೆ ಕೊಟ್ಟಿತ್ತು. ಆದ್ದರಿಂದ ಹೆಚ್ಚು ಅಕ್ಕಿಯನ್ನು ಅದು ಕೊಡುತ್ತಿತ್ತು. ಆದರೆ ಈಗಿನ ಸರ್ಕಾರಕ್ಕೆ ಈ ಯೋಜನೆಯ ಬಗ್ಗೆ ಹೆಚ್ಚಿನ ವಿಶ್ವಾಸವಿಲ್ಲದ ಕಾರಣದಿಂದ ಕಡಿಮೆ ಕಳುಹಿಸಿರುವುದು ಕಾರಣ ಇರಬಹುದೇ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಇದನ್ನು ಕಾಕತಾಳೀಯ ನ್ಯಾಯಕ್ಕೆ ಹೋಲಿಕೆ ಮಾಡು ವುದು ಸರಿಯಲ್ಲ. ಇಲ್ಲಿ ಕೆಲವು ಸಲ ಏನಾಗುತ್ತದೆಂದರೆ, ರಾಗಿ ತಿನ್ನುವವರು ಜಾಸ್ತಿ ಇರುವ ಕಡೆಗೆ ಅಕ್ಕಿಯನ್ನು ಕಳುಹಿಸಿಕೊಟ್ಟರೆ, ಅವರು ಅದನ್ನು ತೆಗೆದುಕೊಳ್ಳುವುದಿಲ್ಲ. ಆಗ ಮತ್ತೆ ಆ ವ್ಯಾಗಿನನ್ನು ವಾಪಸ್ ತರಿಸಿಕೊಂಡು, ರಾಗಿಯನ್ನು ಕಳುಹಿಸಿಕೊಡಬೇಕಾಗುತ್ತದೆ. ಇದರಿಂದ ಕೆಲವು ಸಲ ನಿಧಾನ ವಾಗುವುದುಂಟು. ಈ ದೃಷ್ಟಿಯಿಂದ ಜನತಾ ಸರ್ಕಾರಕ್ಕೆ ವಿಶ್ವಾಸವಿತ್ತು. ನಮಗೆ ವಿಶ್ವಾಸವಿಲ್ಲ ಎಂದು ಮಾನ್ಯ ಸದಸ್ಯರು ಕಲ್ಪನೆ ಮಾಡಬಾರದು.

ಶ್ರೀ ಎ. ಜಿ. ಕೊಡಗಿ.—ಈ ಯೋಜನೆಯ ಕೆಳಗೆ ಕೆಲಸ ಮಾಡಲು ೧೯೬೯-೭೦ ರಲ್ಲಿ ನಮ್ಮ ಜಿಲ್ಲೆಯಲ್ಲಿ ಎಷ್ಟು ಜನರು ಬರುತ್ತಿದ್ದರೋ ಅಷ್ಟೇ ಜನರು ೧೯೭೦-೭೧ ರಲ್ಲಿ ಕೆಲಸ ಮಾಡಲು ಸಿದ್ಧ ವಾಗಿದ್ದರು. ಆದರೂ ಸಹ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿಯನ್ನು ಒದಗಿಸದಿರಲು ಕಾರಣವೇನು ?

ಶ್ರೀ ಬಿ. ರಾಮಯ್ಯ.—ನಾನು ವಿವರವಾಗಿ ಹೇಳಿದ್ದೇನೆ. ಈ ಬಗ್ಗೆ ಇನ್ನೂ ಒಂದು ಮಾತನ್ನು ಹೇಳಬೇಕೆಂದರೆ, ೧೯ ಜಿಲ್ಲೆಗಳ ಪೈಕಿ ಈ ಉದ್ಯೋಗ ದೃಢೀಕರಣ ಯೋಜನೆಯ ಬಗ್ಗೆ ಹೆಚ್ಚಿನ ಬೇಡಿಕೆ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ ಆದಕ್ಕಾಗಿ ಎಲ್ಲ ತರಹದ ಉತ್ತೇಜನವನ್ನು ನಾವು ಕೊಟ್ಟಿದ್ದೇವೆ. ಈಗ ಬೇರೆ ಜಿಲ್ಲೆಗಳಲ್ಲಿ ನಾವು ಒದಗಿಸಿದ ಕಾಳು ಮತ್ತು ಹಣ ಲ್ಯಾಪ್ಸ್ ಆಗಿದೆ. ಆದರೆ ಈ ಜಿಲ್ಲೆಯಲ್ಲಿ ಇದಕ್ಕೆ ಹೆಚ್ಚಿನ ಉತ್ಸಾಹವಿದೆ. ಆದನ್ನು ನಾನು ಮೆಚ್ಚಿದ್ದೇನೆ ಆದ್ದರಿಂದ ಮಾನ್ಯ ಸದಸ್ಯರು ಹೇಳಿ ದ್ದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ ಅಲ್ಲಿ ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಿಸೋಣ.

Retrenchment of Measures in R.M.C. Arasikere

128 SRI D.B. GANGADHARAPPA (Arasikere)—Will the Minister of State for Marketing and Muzarai be pleased to state :—

(a) whether it is a fact that the Secretary R.M.C. Arasikere has retrenched 25 weighmen without any reason ;

(b) if so, what about the fact of these people ;

(c) if is it a fact that these weighmen did not support for illegal activities of officers of R.M.C. Arsikere ;

(d) if so what action the government is going to take against those officers and government will instruct the concerned to re-employ these weighmen ?

SRI SUDHENDRA RAO KASBE (Minister of State for Marketing and Muzarai)—

(a) No.
(b) Does not arise.
(c) No.
(d) Does not arise.

ಶ್ರೀ ಡಿ.ಬಿ. ಗಂಗಾಧರಪ್ಪ.—ಉತ್ತರದಲ್ಲಿ ಯಾರನ್ನೂ ತೆಗೆದುಹಾಕಿಲ್ಲ ಎಂದು ಹೇಳಿದ್ದೀರಿ. ಕಳೆದ ೩ ತಿಂಗಳಲ್ಲಿ ೨೫ ಜನರನ್ನು ತೆಗೆದುಹಾಕಿದ್ದಾರೆ, ಎನ್‌ಕ್ವೈರಿ ಮಾಡಿ ಪುನರ್‌ನೇಮಕ ಮಾಡಬೇಕು ಎಂದು ಹೇಳಿದ್ದೆ. ಇದು ಸತ್ಯವಾದರೆ ಯಾರು ಮಾಹಿತಿ ಕೊಟ್ಟಿದ್ದಾರೋ ಅವರ ಮೇಲೆ ಏನು ಕ್ರಮ. ತೆಗೆದುಕೊಳ್ಳುತ್ತೀರಿ?

†ಶ್ರೀ ಸುಧೀಂದ್ರರಾವ್ ಕಸಬೆ.—ಈ ವೇಮೆನ್ ನೌಕರರಲ್ಲ. ರೆಗ್ಯುಲೇಟೆಡ್ ಮಾರ್ಕೆಟಿಗೆ ಬರತಕ್ಕಂಥ ಮಾಲುಗಳ ಮೇಲೆ ಅವಲಂಬಿಸಿದೆ. ಸಂಪ್ರದಾಯದ ಪ್ರಕಾರ ೧೯೭೬-೭೭ರಲ್ಲಿ ೩೭ ಮಂದಿಗೆ ಲೈಸನ್ಸ್ ಇಷ್ಯೂ ಮಾಡಿದೆ. ೧೯೭೮-೭೯ರಲ್ಲಿ ೪೧ ಮಂದಿಗೆ ಕೊಟ್ಟಿದ್ದೇವೆ. ೧೯೭೯-೮೦ ರಲ್ಲಿ ೪೩ ಮಂದಿಗೆ ಕೊಟ್ಟಿದೆ. ೧೯೮೦-೮೧ರಲ್ಲಿ ೫೦ ಮಂದಿಗೆ ಕೊಟ್ಟಿರುವುದು. ಲೈಸನ್ಸ್ ಪಡೆದಿರ ತಕ್ಕ ವೇಮೆನ್ ಇನ್‌ಕಂ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಬರತಕ್ಕಂಥ ಸರಕುಗಳ ಒತ್ತಡದ ಮೇಲೆ ಅವಲಂಬಿಸಿರುತ್ತದೆ. ೧೯೭೬-೭೭ರಲ್ಲಿ ೩೭ ಜನ ಏನಿದ್ದರು ಅವರಿಗೆ ಆದಾಯ ಕಡಿಮೆಯಾಗಿರುವುದ ರಿಂದ, ಇದಂ ಅಧಿಕಾರಿಗಳ ಗಮನಕ್ಕೆ ಬಂದಾಗ ಲೈಸನ್ಸ್ ರಿನ್ಯೂ ಮಾಡಿಲ್ಲ, ತೆಗೆದುಹಾಕಿದ್ದಾರೆ.

ಶ್ರೀ ಡಿ.ಬಿ. ಗಂಗಾಧರಪ್ಪ.—೧೯೭೯-೮೦ರಲ್ಲಿ ಸರಕು ಎಷ್ಟು ಬಂದಿದೆ, ಎಷ್ಟು ಆದಾಯ ಜಾಸ್ತಿ ಆಗಿದೆ ಹಿಂದೆ ನಾನ್ ಅಫಿಷಿಯಲ್ ಕಮಿಟಿ ಇದ್ದಾಗ ಅವಕಾಶ ಮಾಡಿಕೊಟ್ಟಿದ್ದರು. ಅಡ್ಮಿನಿಸ್ಟ್ರೇಟರ್ ಬಂದ ಮೇಲೆ ಕೆಲವು ಜನ ಹಿತಾಸಕ್ತಿಗಳು, ಆದಾಯ ಕಡಿಮೆಯಾಯಿತು ಎಂದು ಸೆಕ್ರೆಟರಿ ಅಸಿಸ್ಟೆಂಟ್ ಸೆಕ್ರೆಟರಿ ಸೇರಿಕೊಂಡು ತೆಗೆದುಹಾಕಿದ್ದಾರೆ. ಇದರಿಂದ ಇವರಿಗೆ ಏನು ಅನ್ಯಾಯವಾಗಿದೆ, ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸುಧೀಂದ್ರರಾವ್ ಕಸಬೆ.—ಸ್ಪಷ್ಟರ್ಥಕ್ಕಾಗಿ ಈ ರೀತಿ ಅನ್ಯಾಯವಾಗಿದ್ದರೆ ಪರಿಶೀಲನೆ ಮಾಡುತ್ತೇನೆ. ವೇಮೆನ್‌ಗೆ ಅವಕಾಶ ಮಾಡಬೇಕಾದರೆ ಸರಕುಗಳ ಒತ್ತಡದ ಮೇಲೆ ಅವಲಂಬಿಸಿರು ತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ.—ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಕಳೆದ ಸಾರಿ ಎಷ್ಟು ಸರಕು ಬಂದಿದೆ. ಎಷ್ಟು ಲಾಭ ಬಂದಿದೆ, ಈ ಸಾರಿ ಎಷ್ಟು ಸರಕು ಬಂದಿದೆ, ಎಷ್ಟು ಲಾಭ ಬಂದಿದೆ?

ಶ್ರೀ ಸುಧೀಂದ್ರರಾವ್ ಕಸಬೆ.—ಈ ವರ್ಷ ೧೨ ಲಕ್ಷ ರೂಪಾಯಿ ಬಂದಿದೆ. ಬರಗಾಲವಿರುವುದ ರಿಂದ ಉತ್ಪನ್ನ ಕಡಿಮೆಯಾಗಿದೆ.

ಶ್ರೀ ವಿ.ಎಲ್. ಶಿವಪ್ಪ.—ಇದರಲ್ಲಿ ವೇಮೇನ್ ಇಷ್ಟೇ ಇರಬೇಕು ಎಂದು ನಿಗದಿ ಮಾಡಿದ್ದೀರಾ, ಯಾರು ಯಾರಿಗೆ ಏನೇನು ಸಂಪಾದನೆ ಬರಬಹುದು ಎನ್ನುವ ದೃಷ್ಟಿಯಿಂದ ನೇಮಕ ಮಾಡಿಕೊಳ್ಳು ತ್ತೀರಾ. ಅವರಿಗೆ ಸಂಪಾದನೆ ಆಗಲಿ ಬಿಡಲಿ, ಲೈಸನ್ಸ್ ರಿನ್ಯೂ ಮಾಡುವುದಕ್ಕೆ ಏನು ಕಷ್ಟ?

ಶ್ರೀ ಸುಧೀಂದ್ರರಾವ್ ಕಸಬೆ.—ನಾನು ಈಗಾಗಲೇ ಹೇಳಿದೆ. ರೆಗ್ಯುಲೇಟೆಡ್ ಮಾರ್ಕೆಟಿಗೆ ಬರ ತಕ್ಕಂಥ ವರಮಾನದ ಒತ್ತಡದ ಮೇಲೆ ಅವಲಂಬಿಸಿದೆ. ಅವರಿಗೆ ಹೊಟ್ಟೆ ತುಂಬ ಬೇಕಲ್ಲ.

ಅಧ್ಯಕ್ಷರು.—ಅವರಿಗೆ ಕೆಲಸ ಇರಲಿ ಇಲ್ಲದೇ ಇರಲಿ, ಅವರ ಹಣೆಬರಹ. ಲೈಸನ್ಸ್ ರಿನ್ಯೂ ಏಕೆ ಮಾಡಿಲ್ಲ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವರು ನೌಕರರಲ್ಲ, ಅವರಿಗೆ ಸಂಬಳ ಕೊಡು ವುದಿಲ್ಲ, ಕೆಲಸ ಮಾಡಿದರೆ ಬರುತ್ತದೆ, ಲೈಸನ್ಸ್ ರಿನ್ಯೂ ಮಾಡುವುದಕ್ಕೆ ಏನು ಕಷ್ಟ.

ಶ್ರೀ ಸುಧೀಂದ್ರರಾವ್ ಕಸಬೆ.—೧೯೭೯-೮೦ರಲ್ಲಿ ೩೭ ಜನರನ್ನು ತೆಗೆದುಕೊಂಡಿದ್ದೇವೆ. ಅವರು ಕಂಪ್ಲೈಂಟ್ ಕೊಟ್ಟ ಕಾರಣಕ್ಕಾಗಿ ಮುಂದೆ ಸೀನಿಯಾರಿಟಿ ಪ್ರಕಾರ ತೆಗೆದುಕೊಂಡಿದ್ದೇವೆ.

ಶ್ರೀ ಡಿ.ಬಿ. ಗಂಗಾಧರಪ್ಪ.— ಕಳೆದವರ್ಷ ಸೆಸ್ಸು ಎಷ್ಟು ಕಲೆಕ್ಟಾಗಿದೆ, ಈ ವರ್ಷ ಎಷ್ಟಾಗಿದೆ, ಲೀಕೇಜು ಎಷ್ಟಾಗಿದೆ ಎಂದು ನೋಡಿದಾಗ ವೇಮೆನ್ ಅವಶ್ಯಕತೆ ಇದೆ ಎಂದು ಕಂಡುಬರುತ್ತದೆ. ಸರಿಯಾಗಿ ಎನ್‌ಕ್ವೈರಿಮಾಡಿ, ನೂರಾರು ಜನ ಹೇಳುತ್ತಿದ್ದಾರೆ. ಸಾವಿರಾರು ರೂಪಾಯಿಗಳು ಸೆಸ್‌ನಲ್ಲಿ ಲೀಕೇಜಾಗುತ್ತಾ ಇದೆ. ಅಧಿಕಾರಿಗಳು ಮತ್ತು ಪರ್ತಕರು ಶಾಮೀಲಾಗಿದ್ದಾರೆಂದು ಹೇಳುತ್ತಿದ್ದಾರೆ ಸಾವಿರಾರು ಚೀಲ ಅಕ್ಕಿ ಮಾರ್ಕೆಟ್‌ಗೆ ಬರುತ್ತದೆ, ಅದರಲ್ಲಿ ಅರ್ಧ ಭಾಗಕ್ಕೂ ಸೆಸ್ ಕೊಡುತ್ತಾ ಇಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸುಧೀಂದ್ರರಾವ್ ಕಸಬೆ.—ಒಂದು ವೇಳೆ ಅದು ಸರ್ಕಾರದ ಗಮನಕ್ಕೆ ಬಂದರೆ ಪುನಃ ಲೈಸನ್ಸ್ ರಿನ್ಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಂಲ್ಲಾರಗೌಡ ಶಂಕರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ರೆಗ್ಯುಲೇಟಿಡ್ ಖಾತೆಯ ಮಂತ್ರಿಗಳನ್ನು ಕೇಳುತ್ತೇನೆ. ೧೦ ರೂಪಾಯಿ ತೆಗೆದುಕೊಂಡು ವೇಮೆನ್‌ಗೆ ಲೈಸೆನ್ಸ್ ರಿನ್ಯೂ ಮಾಡುತ್ತೀರಿ. ಈ ವೇಮೆನ್‌ರನ್ನು ಸರ್ಕಾರಿ ನೌಕರರನ್ನಾಗಿ ಪರಿವರ್ತಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಸುಧೀಂದ್ರರಾವ್ ಕಸಬೆ.—ಈಗ ಈ ಪ್ರಶ್ನೆ ಸರ್ಕಾರದ ಗಮನವಲ್ಲಿ ಇಲ್ಲ.

Strength of Casual Employees in Bangalore Water Supply and Sewerage Board

170 SRI B.V. RAMACHANDRA REDDY (Varthur) —Will the Minister for Housing and Urban Development be pleased to state : —

(a) how many have been employed on casual basis (daily wage NMR etc ,) in Bangalore Water Supply and Sewerage Board during 1979-80 till the end of June 1980 ;

(b) of them how many belong to Backward and Scheduled Castes ;

(c) the procedure followed in selecting the above persons for taking them into work ?

SRI DHARAMSINGH NARAYANSINGH ((Minister for Housing and Urban Development)—

(a) 163.

(b) Backward Class ... 98
Scheduled Castes ... 40

(c) By appointment on daily wages under N.M.R.

ಶ್ರೀ ಬಿ ವಿ. ರಾಮಚಂದ್ರ ರೆಡ್ಡಿ.—ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಕ್ಯಾಶುವಲ್ ವರ್ಕ್ಸ್‌ಗೆ ಇದುವರೆಗೆ ತೆಗೆದುಕೊಂಡಿರುವ ಜನ ಎಷ್ಟು, ನೇಚರ್ ಆಫ್ ವರ್ಕ್ ಏನು?

† ಶ್ರೀ ಧರ್ಮಸಿಂಗ್.—೧೬೩ ಜನರನ್ನು ತೆಗೆದುಕೊಂಡಿದ್ದೇವೆ. ಪ್ರಾಜೆಕ್ಟ್ ಮೇಂಟೆನೆನ್ಸ್ ಗೋಸ್ಕರ ಕೆಲಸ ಮಾಡುತ್ತಾ ಇದ್ದಾರೆ.